# ಕೈವಾರ ತಾತಯ್ಯನ ಕೀರ್ತನ ವಚನಗಳಲ್ಲಿ ಜೀವನ ದರ್ಶನ.

**ಡಾ. ವಿಜಯ ಕುಮಾರ ಎಸ್.**
ಕನ್ನಡ ಉಪನ್ಯಾಸಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಹೊಸಕೋಟೆ
ಬೆಂಗಳೂರು ಗ್ರಾಮಾಂತರ–562114.
vijaysw1982@gmail.com

**Article Link: https://aksharasurya.com/2023/06/vijaya-kumara-s/**

ಕೈವಾರ ತಾತಯ್ಯನೆಂದೇ ಪ್ರಸಿದ್ಧಿ ಪಡೆದಿರುವ ಶ್ರೀ ಯೋಗಿ ನಾರಣಪ್ಪ (ನಾರಾಯಣಪ್ಪ) ನವರು ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕೈವಾರ ಗ್ರಾಮದಲ್ಲಿ ಕೊಂಡಪ್ಪ ಮತ್ತು ಮುದ್ದಮ್ಮ ದಂಪತಿಗಳಿಗೆ ಜನಿಸಿದವರು. 18–19ನೇ ಶತಮಾನದ (ಕ್ರಿ.ಶ.1726 ರಿಂದ 1836)[1] ನಡುವೆ ಸು.110 ವರ್ಷಗಳ ಕಾಲ ತುಂಬು ಜೀವನ ನಡೆಸಿದ ನಾರಣಪ್ಪನವರು ಬಳೆ ಬಣಜಿಗರ ಜನಾಂಗಕ್ಕೆ ಸೇರಿದವರು. ತಂದೆಯಂತೆ ಬಳೆಮಾರುವ ಕುಲವೃತ್ತಿಯಲ್ಲೆ ತಮ್ಮ ಜೀವನ ಸಾಗಿಸುತ್ತಿದ್ದವರು. ತನ್ನ ಸೋದರತ್ತೆಯಾದ ಧರ್ಮಕ್ಕನವರ ಮಗಳಾದ ಮುನಿಯಮ್ಮನನ್ನು ಮದುವೆಯಾಗಿ ಪೆದ್ದಕೊಂಡಪ್ಪ, ಚಿನ್ನಕೊಂಡಪ್ಪ ಎಂಬ ಎರಡು ಗಂಡುಮಕ್ಕಳು, ಮುದ್ದಮ್ಮ ಎಂಬ ಒಂದು ಹೆಣ್ಣು ಮಗುವಿನ ತಂದೆಯಾಗಿ ಲೋಕ ಜಂಜಾಟಗಳಲ್ಲಿ, ಸಂಸಾರ ಸಾಗರದಲ್ಲಿ ಮೇಲೆಂಬುದಿಲ್ಲದೆ ತಮ್ಮ ಜೀವನದಲ್ಲಿ ಹೆಂಡತಿಯ ಮಾತುಗಳನ್ನು ಕೇಳಿಸಿಕೊಂಡು ಕೃಷ್ಣಾರ್ಪಣವೆಂಬಂತೆ ಜೀವನ ಸಾಗಿಸುತ್ತಿರುತ್ತಾರೆ. “ಹೆಂಡತಿಯ ಗಯ್ಯಾಳಿತನವನ್ನು ನೋಡಿ ಕೆಲವರು ನಾರೇಯಣಪ್ಪನವರನ್ನು ಕುರಿತು ‘ಇಷ್ಟೆಲ್ಲಾ ಮಾಡುತ್ತಿದ್ದರೂ ನಿನಗೆ ಇದೆಂತಹ ವೈರಾಗ್ಯವಪ್ಪಾ? ನಾಲ್ಕು ಬಿಗಿದು ಬುದ್ಧಿ ಹೇಳಬಾರದೇ? ಈ ರಾದ್ಧಾಂತಗಳ ನಡುವೆ ಹೇಗೆ ಬಾಳುತ್ತೀ?’ ಎಂದು ಕೇಳಿದಾಗ ‘ನನ್ನ ಹೆಂಡತಿ ಒಳ್ಳೆಯವಳು. ಆಕೆ ನನ್ನ ಬಾಳಿನ ದೇವರು. ಆಕೆಯನ್ನು ಬಿಟ್ಟು ಒಂದು ಕ್ಷಣವೂ ಇರಲಾರೆ. ಏನು ಮಾಡುವುದು?’ ಎಂದು ತನ್ನ ಹೆಂಡತಿಯ ಮೇಲಿನ ಪ್ರೀತಿಯನ್ನು ತೋಡಿಕೊಂಡು ಅವರ ಬಾಯಿ ಮುಚ್ಚಿಸುತ್ತಿದ್ದರು. ಮುನಿಯಮ್ಮನಾದರೋ ಸಿಡುಕಿ ಸಂಸಾರ ಪೋಷಣೆಗೆ ಮಕ್ಕಳ ಶುಶ್ರೂಷೆಗೆ

ಆಸೆಪಟ್ಟು ಬೇಗ ಶ್ರೀಮಂತರಾಗಬೇಕೆಂದು ಯೋಚಿಸುತ್ತದ್ದಳೇ ಹೊರತು ಯಾವ ಕೆಟ್ಟ ಗುಣಗಳೂ ಇರಲಿಲ್ಲ."[2] ಎನ್ನುತ್ತಾ ಹೀಗೆ ಹೆಂಡತಿಯಿಂದ ಎಷ್ಟೇ ಬೈಗುಳ ಬಂದರೂ, ಸಾಲಗಾರರು ಅವಮಾನಿಸಿದರೂ ಶಾನುಭೋಗ ಮಲ್ಲಯ್ಯ ತನ್ನೆಲ್ಲಾ ಆಸ್ತಿಯನ್ನು ಕಿತ್ತುಕೊಂಡು ಅವಮಾನಿಸಿ ಹೀಯಾಳಿಸಿದರೂ "ಅಪ್ಪಾ ಶ್ಯಾನುಭೋಗ ಮಲ್ಲಯ್ಯಾ ನೀನೂ ನಾನು ಪರಿಶುದ್ಧನಾಗಲು ಸಹಕರಿಸಿದೆ. ಭಗವಂತನ ಪ್ರೇರಣೆಯಿಂದ ನೀನು ಸಹ ನನಗೆ ಮಾರ್ಗದರ್ಶಿಯಾದೆ. ನಿನಗೆ ತಪ್ಪಿನ ಅರಿವಾಗಿದೆ. ಮಾನವನು ಮಾಯೆಯ ಮಹಿಮೆಯಿಂದ ಮಾಡುವ ತಪ್ಪುಗಳನ್ನು ತಿದ್ದಿಕೊಂಡು ಜ್ಞಾನಿಯಾದರೆ ಆತನಿಗಿಂತಲೂ ಇನ್ನಾರು ಶ್ರೇಷ್ಠರಿದ್ದಾರೆ? ತನ್ನ ತಪ್ಪುಗಳನ್ನು ಒಪ್ಪಿಕೊಳ್ಳುವವನೇ ಸಜ್ಜನನು"[3] ಎಂದು ಎಲ್ಲರೂ ಒಳ್ಳೆಯವರೇ ಎನ್ನುತ್ತಾರೆ. ಹೀಗೆ ಉತ್ತಮವಾದ ಸಮೃದ್ಧ ಜೀವನ ನಡೆಸಿದ ತಾತಯ್ಯನವರು ಹೆಂಡತಿಯ ಕಾರಣವಾಗಿಯೇ ವ್ಯಾಪಾರ ಮಾಡಲೆಂದು ಹೊರಟ ನಾರೇಯಣಪ್ಪರಿಗೆ ಕನಸಿನಲ್ಲಿ ಕಂಡ ಮೊಗಲಿ ವೆಂಕಟಗಿರಿ ಕಣಿವೆಯ ಪರದೇಶಿ ಸ್ವಾಮಿಗಳನ್ನು ಹುಡುಕಿಕೊಂಡು ಹೋಗಿ ಅವರಿಂದ ಗುರುಬೋಧೆ(ದೀಕ್ಷೆ)ಯನ್ನು ಪಡೆದು ಇದ್ದ ಮಲ್ಲಾರವನ್ನೆಲ್ಲಾ ಅದೃಶ್ಯ ಲಕ್ಷ್ಮಿಗೆ ತೊಡಿಸಿ ಕೃಷ್ಣಾರ್ಪಣ ಮಾಡಿ ಮನೆಗೆ ಹೊರಟರೆ ಹೆಂಡತಿ ಮುನಿಯಮ್ಮನು ಬಟ್ಟೆ ಹಿಡಿದು ಆಚೆ ದಬ್ಬುತ್ತಾಳೆ. ಹೀಗೆ ಹೆಂಡತಿಯಲ್ಲಿನ ಮಾಯೆ ಈ ರೀತಿ ಮಾಡಿಸುತ್ತಿದೆ ಎಂದು ತನಗೆ ತಾನೇ ಬುದ್ಧಿ ಹೇಳಿಕೊಂಡು

"ಊರಿಕೇ ಈ ರೀತಿ ಉಲ್ಲಾಸ ಪಡುನ್ಯಾಲ ಊರಕುಂಡವೆ ನೀವು ಮನಸಾ,
ವೆನಕ ಮುಂದರ ಚೂಡು ಎವರಿಕೆವ್ವರೂ ಲೇರು
ಏಮಂದು ನೀ ಬುದ್ಧಿ ಎಂತ ಚೆಪ್ಪಿನ ವಿನವು ಮನಸಾ"॥ಊ॥[4]

(ಸುಮ್ಮನೆ ಈ ರೀತಿ ಉಲ್ಲಾಸ ಪಡುತೀಯ ಸುಮ್ಮನಿರಬಾರದೆ ನೀನು ಮನಸೇ, ಹಿಂದೆ ಮುಂದೆ ನೋಡು ಯಾರಿಗೆ ಯಾರು ಇಲ್ಲ ಏನೇಳಲಿ ನಿನಗೆ ಬುದ್ಧಿ ಎಷ್ಟು ಹೇಳಿದರೂ ಕೇಳವೆ ಮನಸಾ) ಎನ್ನುತ್ತಾ ಮನೆ ಬಿಟ್ಟು ಹೋಗಿ ಉದ್ಭವ ಯೋಗ ನರಸಿಂಹ ಗುಹೆಯಲ್ಲಿ ಘೋರ ತಪಸ್ಸನ್ನಾಚರಿಸಿ ಯೋಗಿಯಾಗುತ್ತಾರೆ. ಮುಂದೆ ನಾರೇಯಣ ಆಗಿದ್ದವರು ಎಲ್ಲರ ಪ್ರೀತಿಯ "ತಾತಯ್ಯ"ನಾಗುತ್ತಾರೆ.

ನಾರೇಯಣಪ್ಪನವರು ತಮ್ಮ ಬಾಲ್ಯದ ದಿನಗಳಿಂದಲೂ ಪೂಜಿಸಿದ ಕೈವಾರ ಅಮರ ನಾರಾಯಣ ಸ್ವಾಮಿಯ ಪೂಜಾ ಕೈಂಕರ್ಯಗಳಿಂದ ಹಿಡಿದು,

ದೇವರ ಭಜನೆ, ವೃತ್ತಿ ಬದುಕಿನ ಅನೇಕ ಅನುಭವಗಳು, ಸಂಸಾರ ಜೀವನದ ಜೊತೆ ಜೊತೆಗೆ ದೈವ ಭಕ್ತಿ, ಆ ನಂತರ ಯೋಗಿ, ಆ ನಂತರ ಅನುಭಾವಿಗಳಾಗಿ ದಾರ್ಶನಿಕರಾದ ಚರಿತ್ರೆ ಪವಾಡ ಸದೃಶ ರೀತಿಯಲ್ಲಿ ಅನಾವರಣಗೊಳ್ಳುತ್ತದೆ. ಈ ಕೈವಾರ ತಾತಯ್ಯನವರು ದಾರ್ಶನಿಕರಾದ ನಂತರ, ಯೋಗಿಯಾದ ನಂತರ ರಚಿಸಿದ ಹಲವು ರಚನೆಗಳು ತೆಲುಗಿನಲ್ಲಿದ್ದರೂ ಅದು ಕನ್ನಡ ದೇಸಿ ಪರಂಪರೆಯಿಂದ ಪ್ರಭಾವವಾಗಿರುವುದನ್ನು ಗಮನಿಸಬಹುದು. "ಕೈವಾರ ನಾರಾಯಣಪ್ಪ, ಕೈವಾರ ತಾತಯ್ಯ, ಕೈವಾರ ನಾರೇಯಣ ಕವಿ, ಕೈವಾರದ ಯೋಗಿ ನಾರೇಯಣ ಯತೀಂದ್ರರು ಮುಂತಾಗಿ ಕರೆಯಲಾಗುವ ಕೈವಾರ ನಾರಾಯಣಪ್ಪನವರು ಹುಟ್ಟಿದ್ದು, ಬೆಳೆದಿದ್ದು, ಈ ಕೈವಾರವೆಂಬ ಆಂಧ್ರದ ಗಡಿಯ ಕುಗ್ರಾಮದಲ್ಲಿಯೇ. ಆದ್ದರಿಂದಲೇ ಭಾಷಿಕ ಹಾಗೂ ಭೌಗೋಳಿಕ ವೈಶಿಷ್ಟ್ಯಕ್ಕೆ ಅನುಗುಣವಾಗಿ ಕೈವಾರವನ್ನು ಮತ್ತು ಕೈವಾರ ತಾತಯ್ಯನವರನ್ನು ಕುರಿತ ಸ್ಥಳನಾಮ, ಐತಿಹ್ಯ ಮತ್ತು ದಂತಕಥೆಗಳು"[5] ಹೆಚ್ಚು ಪ್ರಚಲಿತದಲ್ಲಿವೆ. ಇಂತಹ ವಿಶಿಷ್ಟ ಪರಂಪರೆಯನ್ನು ಹೊಂದಿರುವ, ದ್ವಿಭಾಷಿಕ ಪರಂಪರೆಯ ಹಿನ್ನೆಲೆಯಿಂದ ಬಂದ, ಕೈವಾರವನ್ನು ತಮ್ಮ ಕಾರ್ಯ ಕ್ಷೇತ್ರವನ್ನು ಮಾಡಿಕೊಂಡಿದ್ದ ಅವಿಭಜಿತ ಕೋಲಾರ ಜಿಲ್ಲೆಯ ಆದಿ ತತ್ವಪದಕಾರರು, ಕನ್ನಡನಾಡಿನ (ಇತಿಹಾಸ ಪ್ರಸಿದ್ಧ ಕನ್ನಡ ಅರಸರ ಕೈವಾರ ನಾಡು) ತೆಲುಗನ್ನಡ ತತ್ವಪದಕಾರರಾದ ಕೈವಾರ ತಾತಯ್ಯ ಎಂದೇ ಕರೆಯಲಾಗುವ ಕೈವಾರ ನಾರಾಯಣಪ್ಪನವರು ಅತ್ಯಂತ ಅವಜ್ಞೆಗೆ ಗುರಿಯಾಗಿರುವವರಲ್ಲಿ ಅಗ್ರ ಪಂಕ್ತಿಗೆ ಸೇರುತ್ತಾರೆ.

"ಜನ ಸಾಮಾನ್ಯರ ನಡುವೆ ಬದುಕಿದ್ದ ಕೈವಾರ ತಾತಯ್ಯನವರು ತಮ್ಮ ತತ್ವ ಪದಗಳು, ಕೀರ್ತನೆಗಳು ಮತ್ತು ಸರಳವಾಗಿ ನಿರೂಪಿತವಾಗಿರುವ ಶತಕಗಳಲ್ಲಿ ಸಾಮಾಜಿಕ, ಆರ್ಥಿಕ, ಮಾನವೀಯ ವಿಚಾರಗಳಿಗೆ ಸಂಬಂಧಿಸಿದ ಸರಳ ಪದ್ಯಗಳು ಇಂದಿಗೂ ಜನರ ನಾಲಗೆಯ ಮೇಲೆ ಪೀಳಿಗೆಯಿಂದ ಪೀಳಿಗೆಗೆ ಹರಿದು ಜೀವಂತವಾಗಿವೆ"[6]. "ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಮುತ್ತು ರತ್ನೋಪಾದಿಗಳಂತಿರುವ ಆಧ್ಯಾತ್ಮಿಕತೆ, ಯೋಗ ರಹಸ್ಯ, ದೇಹದ ರಹಸ್ಯ, ಭಕ್ತಿಯ ಪರಾಕಾಷ್ಠತೆಯಿಂದ ಕೂಡಿದ ಪಂಡಿತ-ಪಾಮರರಿಗೆ ಒಪ್ಪುವಂತೆ ಶಾಸ್ತ್ರೀಯತೆಗೆ, ಜಾನಪದಕ್ಕೆ, ಲಘು ಸಂಗೀತಕ್ಕೆ ಅಳವಡಿಸಿಕೊಳ್ಳುವಂತೆ 'ಅವರವರ ಭಾವಕ್ಕೆ ಅವರವರ ಭಕುತಿಗೆ' ತಕ್ಕಂತೆ ಅಳವಡಿಸಿಕೊಳ್ಳಲು ಯೋಗ್ಯವಾದ ವರಕವಿ ಸಾಹಿತ್ಯವನ್ನು ಸಮಾಜಕ್ಕೆ ಅರ್ಪಿಸಬೇಕಾದರೆ "ತುದಿಮೊದಲು ನೇನೆರುಗ ತುದಿ

ಕಾಲಜ್ಞಾನಂಬು, ಪಲಿಕಿಂಚುವಾಡು ಸದ್ಗುರುಡು ನೀವೆ (ತುದಿ ಮೊದಲು ನನಗೆ ಗೊತ್ತಿಲ್ಲ ತುದಿ ಕಾಲಜ್ಞಾನವನ್ನು ಹೇಳಿಸುವವನು ಸದ್ಗುರುವು ನೀನೆ)"[7] ಎಂದು ತನ್ನ ಆರಾಧ್ಯ ದೇವನಾದ ಅಮರ ನಾರಾಯಣಸ್ವಾಮಿಗೇ ಅರ್ಪಿಸಿದ್ದಾರೆ.

"ಕೈವಾರ ನಾರೇಯಣಪ್ಪನವರ ಕೃತಿರಾಶಿಯೂ ದೊಡ್ಡದಾಗಿದ್ದು ವೇದಾಂತ ಸಾರಾವಳಿ ಇವರ ಬಹುತೇಕ ಕೃತಿಗಳ ಸಂಕಲಿತ ಗ್ರಂಥ. ಇದುವರೆಗೂ ಪ್ರಕಟಿತವಾಗಿರುವ ಕೃತಿಗಳೆಂದರೆ :

1. ಕೀರ್ತನೆಗಳು (ವೇದಾಂತ ಸಾರಾವಳಿ – ಕೀರ್ತನೆಗಳಿಂದ ಕೂಡಿದ ಸಾಹಿತ್ಯ)
2. ನಾದ ಬ್ರಹ್ಮಾನಂದ ನಾರೇಯಣ ಕವಿ ಶತಕ.
3. ಬ್ರಹ್ಮಾಂಡಪುರಿ ಶತಕ.
4. ಅಮರ ನಾರೇಯಣ ಶತಕ.
5. ವಿಮಲಾತ್ಮ ನಾರೇಯಣ ಕವಿ ಶತಕ.
6. ಕಾಲಜ್ಞಾನ ಸೂಕ್ಷ್ಮ ಭೀಮಲಿಂಗ ಶತಕ.
7. ತಾರಕ ಬ್ರಹ್ಮಾನಂದ ದ್ವಯಕಂದ ಶತಕ.
8. ಪ್ರಚಂಡ ನಾರೇಯಣ ಕವಿ ಪದ್ಯಗಳು.
9. ಶ್ರೀ ಕೃಷ್ಣ ಚರಿತ – ತತ್ವಾಮೃತ – ಯೋಗಸಾರ ಈ ಮೂರನ್ನೂ ಒಳಗೊಂಡ ಶ್ರೀ ಕೃಷ್ಣ ಚರಿತ ತತ್ವಾಮೃತ ಯೋಗಸಾರಮು.
10. ಆತ್ಮ ಬೋಧಾಮೃತ ವಚನಗಳು.[8]

"ಅಮರ ನಾರೇಯಣಾ / ನಾರೇಯಣ ಹರಿ / ನಾರೇಯಣುಕು / ನಾರೇಯಣುನಕು" ಎಂಬ ಅಂಕಿತದೊಂದಿಗೆ ಕೀರ್ತನೆಗಳಲ್ಲಿ (ವೇದಾಂತ ಸಾರಾವಳಿಯಲ್ಲಿ) "ಮಂಗಳಾಚರಣೆಯ ಕೀರ್ತನೆಗಳು ಸೇರಿ 195 ಕೀರ್ತನೆಗಳು (ತತ್ವಪದಗಳೂ ಸೇರಿ) ಇವುಗಳಲ್ಲಿ 16 ಕನ್ನಡದಲ್ಲಿವೆ, ಒಂದು ತೆಲುಗನ್ನಡ ಪದವಿದೆ ಎಂದು ಡಾ. ಸಿ. ಎಸ್. ದ್ವಾರಕನಾಥರವರು ತಮ್ಮ "ಮಣ್ಣ ಬಳೆ ನಾದ" ಸಂಶೋಧನಾ ಕೃತಿಯಲ್ಲಿ ಉಲ್ಲೇಖಿಸುತ್ತಾರೆ. ಹಾಗೆಯೇ ಶ್ರೀ ಅಮರ ನಾರೇಯಣ ವೇದಾಂತ ಸಾರಾವಳಿ ಕೀರ್ತನೆಗಳು ಗ್ರಂಥದಲ್ಲಿ "20 ಕನ್ನಡ ಕೀರ್ತನೆಗಳು, 152 ತೆಲುಗು ಕೀರ್ತನೆಗಳು ಒಟ್ಟು 172 ಕೀರ್ತನೆಗಳನ್ನು" ಶ್ರೀ ಯೋಗಿನಾರೇಯಣ ಮಠ, ಶ್ರೀ ಕ್ಷೇತ್ರ ಕೈವಾರ. ಇವರು ದಾಖಲಿಸುತ್ತಾರೆ.

"ಕಾಲಜ್ಞಾನ ಸೂಕ್ಷ್ಮ ಭೀಮಲಿಂಗ ಶತಕದಲ್ಲಿ ಮೂಲ ಸೀಸ ಪದ್ಯಗಳೆಂದು ಕರೆದಿರುವ 27 ಪದ್ಯಗಳಿವೆ. **'ಅಧಿಕ ಭವಭಂಗ ಕೈವಾರದ ಭೀಮಲಿಂಗ'** ಎಂಬ ಅಂಕಿತದೊಂದಿಗೆ ಪ್ರತಿ ಪದ್ಯ ಮುಗಿಯುತ್ತದೆ. ಇವೆರಡೂ ತಾತಯ್ಯನವರ ವಿಶಿಷ್ಟ ಕೃತಿಗಳಾಗಿವೆ."[9] 'ಬ್ರಹ್ಮಾಂಡಪುರಿ ಶತಕ' ಕೃತಿಯಲ್ಲಿಯೂ 27 ಸೀಸ ಪದ್ಯಗಳಿದ್ದು **1. ಶ್ರೀ ಗುರುರಾಯ** ಪದ್ಯದಲ್ಲಿ ಶ್ರೀ ಗುರುವಿನ ಪಾದಪದ್ಮ ಕಣ್ಣುಗಳ ಕಣಿವೆ, ಭೂ ಮಧ್ಯದ ಆಜ್ಞಾಚಕ್ರ, ಬ್ರಹ್ಮಾಂಡಪುರಿ, ಬ್ರಹ್ಮಾಂಡಪುರಿ ಶತಕ, **2. ಮಾಟಾಡ ನೇರ್ಚುನಾ** ಪದ್ಯದಲ್ಲಿ ದುರ್ಜನ ಸಂಗತಿಯ ಕುರಿತು, **3. ವಿಶ್ವಕರ್ಮ ಜಾತಿ**: ಜಾತಿ–ಕುಲದ ಕೇಡು, **4. ಕಾಮುಡು ಮಗಡೈನ:** ವಿಷಯಸತಿಯೊಡನೆ ಸಂಸಾರ, **5. ಉತ್ತಮ ಗುರುಬುದ್ಧಿ:** ಉತ್ತಮ ಗುರು ಸದ್ಗುರುವಿಗೆ ಸಮನು, ಗುರುಬ್ರಹ್ಮ, **6. ಪರಮ ಪತಿವ್ರತ:** ಯಮನನ್ನು ಅಂಜಿಸುವ ಸಾಧಕರು, ಪತಿವ್ರತೆ–ವಿಧವೆ, **7. ಆತ್ಮ ಶುದ್ಧಿಲೇನಿ:** ನಾಚಿಕೆ ಬಿಟ್ಟು ಬಡಾಯಿ ಕೊಚ್ಚುವ ಚಪಲಚಿತ್ತರು. **8. ಘಟಶೋಧ ಕುಂಡೈನ:** ಘಟಶೋಧಕನಾದ ಅಧಿಕನಾರು?, ಬೆಟ್ಟದ ಬೆಳದಿಂಗಳು, ಯೋಗನಿದ್ರೆ, ಘಟಶೋಧಕ ಯೋಗಿಯ ಪ್ರವರ್ತನೆ. **9. ಉನ್ನಾಡು ಆ ದೊಂಗ:** ಮೂರು ಆಸೆಗಳಿಲ್ಲದ ಹರಿಗುರುಭಕ್ತ, ಜೀವನ್ಮುಕ್ತಿ, ಆತ್ಮ ನಿವೇದನೆ, ಶ್ರೀ ಹರಿಕಥೆಗಳ ರಚನೆ. **10. ಸಾಧಿಂಚಲೇರು:** ಸಾಹಸದ ಸಾಧಕನಿಗೆ ಸಾಕ್ಷಾತ್ಕಾರದ ಸಿದ್ಧಿ, ಶೃಂಗಾರಮಂದಿರ, ಘಟಶೋಧನೆ–ನಾಡಿಚಕ್ರ–ಅಗ್ನಿಪುರಾಣ. **11. ತಾಡು ಮೆಡವೇಸಿತೇ:** ಅಂತರಂಗ ತೊಳೆದರೆ ಅರಸನ ಠೀವಿ, ದೇಹ–ಮನಸ್ಸುಗಳ ಮಡಿ, ಬ್ರಾಹ್ಮಣ ಆರು? ತಾತಯ್ಯನ ಅಭಿಪ್ರಾಯ. **12. ಸತಿ ಸಮಗುಣಮೈನ:** ಸತಿ–ಪುತ್ರ–ಶಿಷ್ಯ–ಸೋದರ. **13. ಯೋಗಮೇ ರೋಗಮೈ:** ಯೋಗ ರೋಗದ ನಾದಯೋಗಿ, ಘಂಟಾ–ಮೃದಂಗ. **14. ಕನುಗುಡ್ಡು–ಕನುರೆಪ್ಪ:** ಯೋಗೀಂದ್ರನೆಂದರೆ ಯಾರು?, ದೃಷ್ಟಿ ಸಾಧನೆ. **15. ಆರು ಮತಮುಲು:** ಮತಾಚಾರ–ಉಪವಾಸ–ಶಿಲಾಪೂಜೆ–ಯಾತ್ರೆಗಳೇಕೆ?, ಆರು ಮತಗಳಾವುವು?, ಬಟ್ಟ ಬಯಲಿನ ಬ್ರಹ್ಮತತ್ವ. **16. ವೈಷ್ಣವಾಚಾರ್ಯ:** ಹರಿಹರ–ಭೇದವಾದದಿಂದ ಭ್ರಷ್ಟತ್ವ, ಭೇದವಾದ, ಅಂತಃದರ್ಶನ. **17. ಮನಸು ತೆಗಿನವಾಡು:** ಯೋಗಕ್ಕೆ ಅರ್ಹರಾದ ಸುಜ್ಞಾನ ಭಾಗವತರು, ಯೋಗಿಯಾಗಲು ನಾಲ್ಕು ಲಕ್ಷಣ. **18. ಗುರುಡೆ ತನ ದೈವ:** ಉಪದೇಶಕ್ಕೆ ಅರ್ಹನಾದ ಶಿಷ್ಯನ ಲಕ್ಷಣ, ಗುರುಸೇವೆ–ಹರಿಭಜನೆ. **19. ಆಚಾರಕ್ರಿಯೆ:** ವೇಷಧಾರಿಯಾದ ಗುರುವಿಗೆ ವ್ಯಥೆ ತಪ್ಪದು, ಗುರು ಪರೀಕ್ಷೆ, ಅವಧೂತೋಪನಿಷತ್ತು. **20. ಮನ್ನು–ರಾಯಿ ಲೇದು:** ದೇಹದೊಳಗಿನ ಕೋಟೆಯಲ್ಲಿ ಸಾಧನೆ, ಕೋಟೆ, ನಾರಾಯಣ ಸೂಕ್ತ. **21. ಮೊನಸಿ ಬಹು ದಿಟ್ಟಡೈ;**

ಶಾಂಭವೀ ಮುದ್ರೆಯಿಂದ ಸಿದ್ಧಿ, ಯೋಗಗ್ರಂಥಗಳಲ್ಲಿ ಸಮರ್ಥನೆ. **22. ಸಂಸಾರಮುನ ಸಾಮು:** ಸಂಸಾರದಲ್ಲೂ ಹಂಸಯೋಗಿ, ಬ್ರಹ್ಮಚರ್ಯ. **23. ಗೋದಾನ–ಭೂದಾನ:** ಸಕಾಮ ಕರ್ಮದ ದಾನ ಧರ್ಮದಿಂದ ಪುನರ್ಜನ್ಮವುಂಟು, ದಶದಾನ, ಸ್ವರ್ಗ–ಮೋಕ್ಷ. **24. ವೇಯಿ ರೆಂಡು ಮೂಡು:** ಧನ ಸಂಗ್ರಹಣೆಯೇ ಧನರೋಗ, ಧನರೋಗಿ, ಕಾಲನ ಭಟರ ಕೈದಿ. **25. ಬ್ರಹ್ಮರುದ್ರುಲಕೈನ:** ಆಧ್ಯಾತ್ಮ ವಿದ್ಯೆಗೆ ಗುರುಬೋಧೆ, ದೃಷ್ಟಿಯೋಗ, ಗುರುಕೀಲು ತತ್ವ. **26. ಗಾಢಾಂಧಕಾರಮ್ಮೈ:** ಆತ್ಮಜ್ಯೋತಿಯ ಬೆಳಕಿನಲ್ಲಿ ತತ್ತ್ವ ಸಾರಾಮೃತ ಪ್ರಾಪ್ತಿ, ಜಿಹ್ವಾಚಾಪಲ್ಯ. **27. ಅಕ್ಷರಕ್ಷರಮುಲು:** ಏಕಾಕ್ಷರವನ್ನು ಅರಿತವನು ಯೋಗಶಾಲಿ, ಮುಂಡಕೋಪನಿಷತ್ತು, ಓಂಕಾರ, ಬ್ರಹ್ಮವಿದ್ಯೆ, ತತ್ತ್ವಗಣಿತ, ಏಕಾಕ್ಷರ, ಓಂ ನಾದ ಬಿಂದೂಪನಿಷತ್ತು, ವರ್ಣಮಾಲೆಯ ಅಕ್ಷರ–ತೆಲುಗು, ಕನ್ನಡ, ಪ್ರಬ್ರಹ್ಮೋಪಾಸನೆ: ಬ್ರಹ್ಮಾಂಡಪುರ ವಿಹಾರ. ಹೀಗೆ 27 ಸೀಸ ಪದ್ಯಗಳಲ್ಲಿ ಒಂದೊಂದು ವಿಷಯವನ್ನು ಕುರಿತು ಹೇಳಿರುವುದು ವಿಶೇಷವೇ ಆಗಿದೆ. ಇವರ ಎಲ್ಲಾ ಶತಕಗಳು "ಅವುಗಳಲ್ಲಿನ ಸಾರ ಮತ್ತು ಅವು ಒಳಗೊಂಡಿರುವ ವಿಚಾರಗಳಾದ ಭಕ್ತಿ, ಅನುಭವ, ವೇದಾಂತ, ಸಮಾಜ, ಕುಟುಂಬ, ನೀತಿಬೋಧೆ, ಧರ್ಮ, ಮತ–ಪಂಥಗಳ ವಿಮರ್ಶೆ, ಯೋಗದ ಹಿರಿಮೆ, ಪ್ರಕೃತಿ ಪ್ರೇಮ, ಪ್ರಾಣಿದಯೆ, ಕರ್ಮ, ಜ್ಞಾನ, ದೈವ, ಗುರು–ಶಿಷ್ಯ, ತಂತ್ರ, ರಾಜಕೀಯ, ಕವಿತ್ವ, ಬೆಡಗು, ಸ್ತ್ರೀ ಸ್ವಭಾವ, ಕುಲ, ಜಾತಿ, ವೃತ್ತಿ–ಮುಂತಾದವು"[10] ಗಳಿಗೆ ಸಂಬಂಧಪಟ್ಟಿವೆ.

ಮನುಷ್ಯನ ಹುಟ್ಟಿನಿಂದಲೇ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ತಾತಯ್ಯನವರು ನೇರವಾಗಿ ಮೂಲಭೂತವಾದಿಗಳನ್ನು, ಸ್ತ್ರೀಯರನ್ನು ಮತ್ತು ಸ್ತ್ರೀಯರ ಮುಟ್ಟಿನ ಸಂದರ್ಭದಲ್ಲಿ ಅವರನ್ನು ನಡೆಸಿಕೊಳ್ಳುವ ರೀತಿ ರಿವಾಜುಗಳನ್ನು ಬೈಯುತ್ತಾರೆ.

"ತಲ್ಲಿ ತಂಡ್ರುಲು ಚಾಲ ಸಾಹಸಂಬುನ ಪೆನಗಿ ರತಿ ಸೇಯಗಾ
ರಮಣಿ ಗರ್ಭಮಂದು ತನುವು ರೂಪಂಬಾಯ ತಲಕ್ರಿಂದುಲುಗಾ ಮಾರಿ
ಉಚ್ಚ ದ್ವಾರಮು ದೂರಿ ವಚ್ಚಿರೀ ನರುಲು"[11]

(ತಂದೆ ತಾಯಿಯರು ಸಾಹಸದಿಂದ ರತಿ ಕ್ರೀಡೆ ಮಾಡಿದಾಗ ತಾಯಿಯ ಗರ್ಭದಲ್ಲಿ ಶಿಶು ಏರ್ಪಾಡಾಯಿತು. ಆ ಶಿಶುವು ತಲೆ ಕೆಳಗಾಗಿ ಮಾರ್ಪಟ್ಟು ಮೂತ್ರ ದ್ವಾರದಿಂದ ಹೊರಕ್ಕೆ ಬಂದರು ಮಾನವರು)

ಇಡೀ ಮಾನವ ಜನಾಂಗವೆಲ್ಲವೂ ಮೂತ್ರ ದ್ವಾರದಿಂದಲೇ ಹೊರಗೆ ಬಂದಿರುವಾಗ ಎಲ್ಲರೂ ಒಂದೇ ಜಾತಿಗೆ ಸೇರಿದವರಾಗಿದ್ದಾರೆ. ಇದರಲ್ಲಿ ಉತ್ತಮ ಕುಲವೆಂಬುದೇ ಇಲ್ಲ. ಇದರ ಜೊತೆಗೆ ಸರ್ವಜ್ಞನ ವಚನಗಳಲ್ಲಿ

"ಮುಟ್ಟಾದ ಹೊಲೆಯೊಳಗೆ । ಹುಟ್ಟಿಹುದು ಜಗವೆಲ್ಲ
ಮುಟ್ಟಬೇಡೆಂದು ತೊಲಗುವ ಹಾರುವನು ।
ಹುಟ್ಟಿದನು ಎಲ್ಲಿ ಸರ್ವಜ್ಞ॥"[12]

ಎಂದು ಹೇಳುವ ಸರ್ವಜ್ಞ ಹುಟ್ಟಿನ ಮೂಲವನ್ನು ಹೇಳಿರುವುದು ನಾವು ನೋಡಬಹುದು. ಇಂತಹದರಲ್ಲಿ

"ಮಾ ಕುಲಮು ಹೆಚ್ಚನುಚು ಮೀ ಕುಲಮು
ಪಿಚ್ಚನುಚು ತರ್ಕವಾದಮು ಸೇಯ ತಗದು ಮೀಕು
ವಿವರಿಂಚಿ ಚೂಸಿತೇ ಇಂದೇಮಿ ಪಸಲೇದು ಮಲತಿತ್ತಿ ದೀನಿಪೈ
ಮಮತ ವಿಡಲೇನು,ಉತ್ತಮ ಕುಲ
ಮನುವಾರು ಎವರೂಲೇರು, ಉತ್ತಮ ಕುಲಮನುಟ ಉಚಿತಮು
ಕಾದುರಾ ನಾದ ಬ್ರಹ್ಮಾನಂದ ನಾರೇಯಣ ಕವಿ"[13].

(ನಮ್ಮ ಜಾತಿ ಹೆಚ್ಚು ನಿಮ್ಮ ಜಾತಿ ಕಡಿಮೆ ಎನ್ನುವ ತರ್ಕವಾದ ವೇತಕ್ಕೆ? ವಿವರಿಸಿ ನೋಡಿದಾಗ ಇದರಲ್ಲೇನೂ ಹುರುಳಿಲ್ಲ. ಇಡೀ ಮಾನವರೆಲ್ಲರೂ ಒಂದೇ ಜಾತಿ ಮತ್ತೊಂದು ಜಾತಿಯನ್ನು ನಾನು ಕಾಣೆ, ಉತ್ತಮ ಕುಲವೆನ್ನುವವರು ಯಾರೂ ಇಲ್ಲ. ಉತ್ತಮ ಕುಲವೆನ್ನುವುದು ಉಚಿತವಲ್ಲ) ಎಂದು ದಾಸರು ಹೇಳುವ

"ಕುಲ ಕುಲವೆಂದು ಹೊಡೆದಾಡಬೇಡಿ
ನಿಮ್ಮ ಕುಲದ ಮೂಲವನೇನು ಬಲ್ಲಿರಾ"

ಎಂಬ ಕೀರ್ತನೆಯಂತೆ ತಾತಯ್ಯನವರು ತಮ್ಮದೇ ಶೈಲಿಯಲ್ಲಿ ನಮ್ಮ ಕುಲ ಹೆಚ್ಚು ನಿಮ್ಮ ಕುಲ ಕಡಿಮೆ ಎನ್ನುವವರನ್ನೆಲ್ಲಾ ಕುಲಗುರುಗಳ ಆದಿಯಾಗಿ ಎಲ್ಲಾ ಜಾತಿ ಹುಚ್ಚರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ.

ಬ್ರಾಹ್ಮಣ ಮತ್ತು ಬ್ರಾಹ್ಮಣತ್ವದ ಬಗ್ಗೆ

"ಮೊದಟ ಶೂದ್ರುಡು – ಪೆಂಡ್ಲಾಮು ಶೂದ್ರದಿ ।
ಜನನಿ ಶೂದ್ರುರಾಲು – ಜಗತಿ ಯೆರುಗು ।
ನಡುಮ ಬ್ರಾಹ್ಮಣುಡಂಟೆ – ನಗುಬಾಟಲಾಯೆರಾ ।
ನಾದ ಬ್ರಹ್ಮಾನಂದ – ನಾರೇಯಣ ಕವಿ ॥

ಹುಟ್ಟಿದ ಆರಂಭದಲ್ಲಿ ಶೂದ್ರ. ಇವನ ಹೆಂಡತಿ ಹುಟ್ಟಿನಿಂದ ಸಾಯುವವರೆಗೆ ಶೂದ್ರಳು–ಏಕೆಂದರೆ ಹೆಂಗಸಿಗೆ ಜನಿವಾರ ಹಾಕಿ ಬ್ರಾಹ್ಮಣತ್ವ ಕೊಡುವ ಆಚಾರ–ಸಂಸ್ಕಾರ ಇಂದಿನ ರೂಢಿಯಲ್ಲಿ ಇಲ್ಲ. ಇವನ ತಾಯಿಯೂ

ಕೂಡ ಶೂದ್ರಳು ಎಂಬುದು ಲೋಕವಿಧಿತಿ. ಮಧ್ಯದಲ್ಲಿ (ಜನಿವಾರ ಹಾಕಿಕೊಂಡು) ಇವನೊಬ್ಬ ಮಾತ್ರ ಬ್ರಾಹ್ಮಣನೆಂದರೆ ನಾಚಿಕೆಗೇಡು"[14] ಈ ರೀತಿ ಜನಿವಾರ ಹಾಕಿಕೊಂಡು ಬ್ರಾಹ್ಮಣರಾಗುವುದಾದರೆ ಅದು ಎಲ್ಲರಿಗೂ ಸಾಧ್ಯವಿದೆ ಎನ್ನುವ ಮೂಲಕ ನಾವು ಬ್ರಾಹ್ಮಣರು ಶ್ರೇಷ್ಠರೆಂದು ಹೊಡೆದಾಡುವವರಿಗೆ ತೀಕ್ಷ್ಣವಾಗಿಯೇ ನಿಂದಿಸುತ್ತಾರೆ.

ಪ್ರಸ್ತುತ ಭಾರತ ಸಮಾಜದಲ್ಲಿ ಜಾತಿಯೇ ಮೇಲುಗೈ ಸಾಧಿಸಿ ಜಾತಿವಾದಿಗಳು ಜಾತಿಯನ್ನೇ ಮೇಲು ಮಾಡಿಕೊಂಡು ಇನ್ನೊಂದು ಜಾತಿಯನ್ನು ಕೀಳುಮಾಡುತ್ತಿರುವುದು ದುರಂತವೇ ಸರಿ. ಹಾಗೆಯೇ ಹೊಲೆ–ಮಾದಿಗ ಜಾತಿಯನ್ನು ತುಂಬಾ ಕೀಳಾಗಿ ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ ಎಂಬ ನಾಲ್ಕು ವರ್ಣಗಳಿಂದಲೇ ದೂರಮಾಡಿ ಸಮಾಜಕ್ಕೆ ಈ ಜಾತಿಗಳು ಮಾರಕವೆಂಬಂತೆ ಇಟ್ಟಿರುವುದು ಮಾನವೀಯ ಸಂಬಂಧಗಳ ಅಧೋಗತಿಯೇ ಸರಿ. ಇಂತಹ ಜಾತಿಗಳಲ್ಲಿನ ಮೇಲು ಕೀಳುಗಳನ್ನು ಕಾಲಕಾಲಕ್ಕೆ ಕವಿಗಳು, ವಚನಕಾರರು, ದಾಸರು, ಯೋಗಿಗಳು, ಸಂತರು ತಮ್ಮ ತಮ್ಮ ವಚನ ಕೀರ್ತನೆಗಳಲ್ಲಿ ತಿರಸ್ಕರಿಸುತ್ತಾ ಬಂದಿರುವುದನ್ನು ಕಾಣಬಹುದು. ಹಾಗೆಯೇ ಯೋಗಿ ತಾತಯ್ಯನವರು ಜಾತಿ ಮತ್ತು ದೈವದ ಬಗ್ಗೆ ಈ ರೀತಿ ಹೇಳುತ್ತಾರೆ.

"ಮಾಲವಾಡನಿ ಜನುಲು ಯಾಲ ನಿಂದಿಂತುರು
ಮಾಲವಾನಿ ಆತ್ಮ ಮಂದಿರಮುನ ಸಕಲ ದೇಹ ವಿಹಾರಿ
ಸದ್ಗುರುಡುವುಂಡುರಾ ನಾದ ಬ್ರಹ್ಮಾನಂದ ನಾರೇಯಣ ಕವಿ"

(ಹೊಲೆಯನೆಂದು ಜನರು ಯಾಕೆ ನಿಂದಿಸುವರು, ಹೊಲೆಯನ ಆತ್ಮ ಮಂದಿರದಲ್ಲಿ ಸಕಲ ವಿಹಾರಯಾದ ಸದ್ಗುರುವು ಇರುವನು) ಎಂದು ಹೇಳುತ್ತಾರೆ. ಹಾಗೆಯೇ ಕುಲದ ಹುಚ್ಚು ಹಿಡಿದು ಪ್ರತಿ ಕುಲಕ್ಕೂ ಒಬ್ಬೊಬ್ಬ ಗುರುಗಳು ಇರುವುದನ್ನು ಅವರು ನಮ್ಮ ಕುಲವೇ ಶ್ರೇಷ್ಟ ಎಂದು ಹೊಡೆದಾಡಿಕೊಳ್ಳುವ ಕುಲ ಗುರುಗಳನ್ನು

"ಕುಲಮುಗಲ್ಲಿನ ಗುರುಲು ಅವನಿಲೋ ಉನ್ನಾರು
ಕುಲಮುವಲ್ಲ ವಚ್ಚು ಲಾಭಮೇಮಿ ?
ಅಂತಾ ಒಕೇ ಕುಲಮು ಮರಿ ಒಕಟಿ ಲೇದುರಾ."[15]

(ಕುಲವನ್ನು ಹೊಂದಿರುವ ಗುರುಗಳು ಪ್ರಪಂಚದಲ್ಲಿ ಬಹಳವಾಗಿದ್ದಾರೆ. ಕುಲದಿಂದ ಬರುವ ಲಾಭವೇನಾದರೂ ಏನು? ಎಲ್ಲರದ್ದೂ ಒಂದೇ ಕುಲ ಮತ್ತೊಂದು ಇಲ್ಲ.) ಹಾಗೆಯೇ

"ಲೋಕಾರ್ಥ ಪರುಡೈತೆ ಲೋಕ ಗುರುವನವಚ್ಚು
ಏ ಜಾತಿ ವಾಡೈನಾ ಹೆಚ್ಚೈನ ಗುರುಡೂ
ವಾಡ ಮೀದಕು ಎಕ್ಕಿ ವಾಡ ಬೇರಮು ಪೋತೆ
ನಟ್ಟ ನಡಿ ವಾರಧಿಲೋ ಮುನಗಿ ನಟ್ಲಾಯನ್
ಬಾದ ಗುರುವುಲ ಮಾಯ ಮನಸ್ಸು ಚಪಲಂಬಾಯ
ವುನ್ನ ಮತಿ ಚೆಡಿಪೋಯ ಪಾಮರುಂಡಾಯನ್ ॥
ಚಚ್ಚಿ–ಚಾವನಿ ಗುರುಡು ಸರ್ವಜ್ಞುಡಾಘನುಡು
ಮುಚ್ಚು ಗುರುವುಲಕೆಲ್ಲ ವಚ್ಚುಯಮ ಬಾಧ"[16]

(ಲೋಕಕ್ಕೆ ಉಪಕಾರ ಮಾಡುವವನನ್ನು ಲೋಕದ ಗುರು ಎನ್ನಬಹುದು ಯಾವ ಜಾತಿಯ ಗುರುವಾದರೂ ಅವನು ನಿಜವಾದ ಹೆಚ್ಚಾದ ಗುರುವು. ಆದರೇ ಈ ಜಾತಿಗಳನ್ನು ಅಂಟಿಸಿಕೊಂಡಿರುವ ಕುಲಗುರುಗಳಿಂದ ಇಂದು ಯಾವ ರೀತಿ ಆಗಿದೆಯೆಂದರೆ ನೌಕೆಯಲ್ಲಿ ಹತ್ತಿದ ಮೇಲೆ ನಾವಿಕ ನೌಕೆಯನ್ನು ವ್ಯಾಪಾರಕ್ಕೆ ಇಟ್ಟರೆ ನಡು ಸಮುದ್ರದಲ್ಲಿ ಮುಳುಗಿದಂತಾಯಿತು ನಮ್ಮ ಬಾದೆ ಎಂಬಂತಾಗಿದೆ. ಗುರುಗಳ ಮನಸ್ಸುಗಳು ಮಾಯೆಯ (ಇಹ ಸುಖಗಳ) ಚಪಲಕ್ಕೆ ಬಿದ್ದು ಬುದ್ದಿ ಕೆಟ್ಟುಹೋಗಿ ಪಾಮರನಾದನು, ಸತ್ತು ಸಾಯದ ಗುರುವು ಸರ್ವಜ್ಞನಾಗಿ ಇರುವ ಗುರುಗಳಿಗೆಲ್ಲ ಯಮ ಬಾದೆಯನ್ನು ತಂದ) ಎಂದು ಕುಲ ಗುರುಗಳೆನಿಸಿಕೊಂಡವರು ತಮ್ಮ ಐಹಿಕ ಸುಖಕ್ಕಾಗಿ ಕುಲಗಳನ್ನು ಯಾವ ರೀತಿ ಬೀದಿಗೆ ಇಳಿಸುತ್ತಾರೆ. ಹಾಗೆಯೇ ಮೇಲ್ನೋಟಕ್ಕೆ ಗುರು ಎನಿಸಿಕೊಂಡು ಜಾತಿ, ಕುಲಗಳೆಂಬ ನೌಕೆಗಳನ್ನು ದಡಕ್ಕೆ ಮುಟ್ಟಿಸುತ್ತೇವೆಂದೆ (ಅಭಿವೃದ್ಧಿ ಮಾಡುತ್ತೇವೆಂದು) ಹೇಳಿ ತಮ್ಮ ಕುಲಗಳನ್ನೇ ಮಾರುವಂತಹ ಗುರುಗಳು ಇಂದು ಹೆಚ್ಚಾಗಿ ಲೋಕದ ಅಭಿವೃದ್ಧಿಯನ್ನು ಬಯಸುವ ಯಾವ ಗುರುವು ಇಂದು ಕಾಣಿಸದಾಗಿದೆ ಎಂದು ಕುಲಗುರುಗಳನ್ನು, ಕುಲ ಗುರುಗಳ ಸ್ವಾರ್ಥಪರತೆಯನ್ನು ಖಂಡಿಸುತ್ತಾರೆ.

ಇವರ ಕನ್ನಡ ಕೀರ್ತನೆಗಳು ಕಡಿಮೆ ಸಂಖ್ಯೆಯಾದರೂ ಪ್ರತಿಯೊಂದು ಕೀರ್ತನೆಗಳು ಹೊಸ ಚಿಂತನೆಗಳಿಗೆ ಒಳಗು ಮಾಡುತ್ತದೆ. "ಯಾಕೋ ಮನವೆ ನೀನೂ–ಇಷ್ಟು ಚಿಂತೆಯ ಮಾಡುವದೇನೂ"[17] ಎಂಬ ಕೀರ್ತನೆಯಲ್ಲಿ ಕುಲ ಗೋತ್ರಗಳನ್ನು ಬಿಟ್ಟು ಕೆಟ್ಟ ಜನರ ಸಂಗವ ಸುಟ್ಟು ಮನುಷ್ಯ ತನ್ನೊಳಗಿನ ತನ್ನನ್ನು ಕಂಡುಕೊಳ್ಳುವ, ಮಾಯದ ಸಂಗವನ್ನು ಸಾಯಿಸಿ ಜ್ಞಾನದ ಕಡ್ಗವನ್ನು ಹಿಡಿದು ಬಾಳಿಗೆ ಬಂಟನಾಗುವ ತತ್ವವನ್ನು ತಿಳಿಸುತ್ತಾರೆ. "ಯಾಕೆ ಮರುಳಾದೆ–ಎಲೆ

ಮನವೇ ನೀನು। ಈ ಅಗಡದ ಪ್ರಪಂಚ–ಹಣ ಹೆಣ್ಣು ನೋಡೀ"[18] ಎಂಬ ಕೀರ್ತನೆಯಲ್ಲಿ ಜೀವನದ ಈ ಪಯಣದಲ್ಲಿ ಎಲ್ಲವೂ ನಶ್ವರ. ನಾವು ತಂದಿರುವುದು ಏನೂ ಇಲ್ಲ ಹೊಯ್ಯುವುದು ಏನೂ ಇಲ್ಲ, ಪ್ರಪಂಚದ ತಂದೆ ತಾಯಿಯಾದಿಯಾಗಿ ಎಲ್ಲಾ ಬಂಧಗಳು ಬಾಧ್ಯವಿಲ್ಲ ಕೇವಲ ಅಮರ ನಾರೇಯಣಸ್ವಾಮಿಯ ನಾಮಮಂತ್ರದ ಭಜನೆಯಿಂದ ಮಾತ್ರ ಮುಕ್ತಿ ಸಾಧ್ಯ, ಭಕ್ತನಾಗುವುದು ಸಾಧ್ಯ ಎಂದು ಹೇಳುತ್ತಾರೆ. "ಬಾರೈಯ್ಯ ಗೋವಿಂದ–ಬಂಧಕವು ಬಿಡಿಸೋ। ದೇಹವೇಂಬುವ ಬಂಡಿ–ಯೆಳೆದು ಬಳಲಿದೆನೋ।"[19] ಎಂಬ ಕೀರ್ತನೆಯಲ್ಲಿ ಒಂದು ಜೀವ ದೇಹ ರೂಪ ಪಡೆದುಕೊಂಡು, ಯಾವ ರೀತಿ ರಚನೆಯಾಗಿದೆ ಎಂಬುದನ್ನು ಹೇಳುವುದರ ಜೊತೆಗೆ ಈ ಜನ್ಮವು ಸಾಕು ಇದಕ್ಕೆ ಮೋಕ್ಷವನ್ನು ಕರುಣಿಸಿ ವೈಕುಂಠವನ್ನು ಕರುಣಿಸು, ಮೂರ್ಖ ಅಜ್ಞಾನ ತುಂಬಿರುವ ನನ್ನನ್ನು ಇವುಗಳಿಂದ ಬಿಡಿಸು ಎಂದು ಹೇಳುತ್ತಲೇ "ಕನಕದಾಸರ ಮನೆಯ–ಕಸಗುಡಿಸೋ ಬಡದಾಸ। ಪುರಂದರ ದಾಸರಿಗೆ–ಮಡಿ ಮಾಡೋ ದಾಸಾ। ನಿನ್ನ ನಂಬಿದ ದಾಸ–ಎನ್ನ ಬಿಡುವುದು ಮೋಸ। ಕೈವರದ ಪುರವಾಸ–ಅಮರ ನಾರೇಯಣೇಶ"[20] ಎಂದು ಕನಕ–ಪುರಂದರಾದಿಯಾಗಿ ಎಲ್ಲರನ್ನೂ ನೆನೆದು ನನ್ನ ಬಿಡಬೇಡ ಎಂದು ಕೈವಾರ ಪುರದ ವಾಸನಾದ ಅಮರ ನಾರೇಯಣನಲ್ಲಿ ಮೊರೆಯಿಡುತ್ತಾರೆ ತಾತಯ್ಯನವರು. "ಈ ಪೂರವೊಳಗೆಷ್ಟು ಉತ್ಪಾತವೇನೋ। ದುರಿತ ಸಂಹಾರ ನಾರೇಯಣ ಹರಿಯೇ।"[21] ಎಂಬ ಕೀರ್ತನೆಯಲ್ಲಿ ಲೋಕದ ಜಂಜಾಟಗಳಿಂದ ತನ್ನ ಜೀವನದ ಜಂಜಾಟಗಳಿಂದ ಯಾವಾಗ ಮುಕ್ತಿ ಕರುಣಿಸುತ್ತೀಯ ಎಂದು ಪರಿಪರಿಯಾಗಿ ಕೇಳಿಕೊಳ್ಳುತ್ತಾರೆ. ವಿಶ್ವಾಸಘಾತಕನಾದ ಶ್ಯಾನುಭೋಗ ಮಲ್ಲಯ್ಯ, ತನ್ನ ಹೆಂಡತಿ ಮುನಿಯಮ್ಮ, ತನ್ನ ದೇಹದ ಪಂಚೇಂದ್ರಯಗಳೆಂಬ ಪಾಪಾತ್ಮರು, ಚಾಡಿ ಹೇಳುವ ನೀಚ ಸಂಬಂಧಿಕರು, ಮೋಹವೆಂಬ ಮೋಸಗಾರ ಇದರ ಜೊತೆಗೆ ಸ್ಥಿರವಲ್ಲದ ಜೀವನವೆಂಬ, ಸ್ಥಳವೆಂಬ ಕೊಂಪೆ (ಭೂಮಿ, ದೇಹ) ಯಿಂದ ಮುಕ್ತಿ ಕರುಣಿಸಿ ನಿನ್ನ ಸನ್ನಿಧಾನಕ್ಕೆ ನನ್ನನ್ನು ಆದಷ್ಟು ಬೇಗ ಕರೆಸಿಕೋ ಎಂದು ಕೇಳುತ್ತಾರೆ. ಒಂದು ರೀತಿಯಲ್ಲಿ ಈ ಕೀರ್ತನೆಯು ತಾತಯ್ಯನವರ ಜೀವನ ಸಂಪೂರ್ಣತೆಯನ್ನು ತಿಳಿಸುತ್ತದೆ. ಆದರೆ ಇವರ "ಮೂರು ಮತ್ತು ಐದರ" ಮೇಲೆ ವಿರಕ್ತಿಯಿದ್ದದ್ದು ಇವರ ಹಲವಾರು ಕೀರ್ತನೆಗಳಲ್ಲಿ ಗಮನಿಸಬಹುದು. 1)'ಯಾಕೋ ಮನವೆ ನೀನೂ–ಇಷ್ಟು ಚಿಂತೆಯ ಮಾಡುವುದೇನೂ' ಕೀರ್ತನೆಯಲ್ಲಿನ ಎರಡನೇ ಚರಣದಲ್ಲಿ "ಮೂರೈದಾರೆಂಟರ (ಮೂರು: ಹೆಣ್ಣು, ಹೊನ್ನು, ಮಣ್ಣು. ಮತ್ತು

ಐದು: ಪಂಚೇಂದ್ರಿಯಗಳು. ಒಟ್ಟು ಎಂಟು) ತೊರೆದು"[22] ಎಂದು ಹೇಳುವ ಹಾಗೆಯೇ **2)**'ಚೊಕ್ಕವಾಯಿತು ಈಗ–ಹಣಬಣ್ಣ ಚಿನ್ನ ಚೊಕ್ಕವಾಯಿತು ಈಗ' ಎಂಬ ಕೀರ್ತನೆಯಲ್ಲಿ "ಕಷ್ಟಕಾಮಕ್ರೋಧ–ಮದಮತ್ಸರಂಗಗಳು। ನಷ್ಟವಾಯಿತು ಕಾಯ–ಪಟ್ಟಣದಲ್ಲಿ"[23] ಎಂದು ಅರಿಷಟ್ ವರ್ಗಗಳನ್ನು ತೊರೆಯುವ **3)**'ಈ ದೇಹದೊಳಗಿದ್ದು ವಿಷ ಕಡಿಯಬೇಕು, ವಿಷ ಕಡಿದು ಸುಜ್ಞಾನ–ಪಥದೊಳಿರು ಮನವೇ' ಎಂಬ ಕೀರ್ತನೆಯಲ್ಲಿ

"ಮೂರು ಅಯಿದಾರೆಂಟು–ಮೂರ್ಖರನು ಬಿಡಬೇಕು ।
ಸತಿಸುತರ ಹಿತಬಂಧು–ಜನರ ಬಿಡಬೇಕು ।
ಜಾತಿಭೇದವ ಮಾಡೋ–ಪಾತಕರ ಬಿಡಬೇಕು ।
ಅನುದಿನವು ಗುರುಧ್ಯಾನ–ಮಾಡುತಿರು ಮನವೇ"[24]

ಎಂದು ಪದೇ ಪದೇ ತನ್ನ ಮನಸ್ಸನ್ನು ಇಹ ಸುಖಗಳಿಂದ ನಿಯಂತ್ರಿಸುತ್ತಿರುತ್ತಾರೆ. ಇದು ಮುಂದುವರೆದು **4)**'ಈ ವೂರವೊಳಗೆಷ್ಟು ಉತ್ಪಾತವೇನೋ। ದುರಿತ ಸಂಹಾರ ನಾರೇಯಣ ಹರಿಯೇ' ಎಂಬ ಕೀರ್ತನೆಯಲ್ಲಿ "ಪಂಚೇಂದ್ರಿಯಗಳೆಂಬ–ಪಾಪಾತ್ಮರೈವರು। ಇವರಿಂದ ಪ್ರಾಣಕ್ಕೆ–ಹಾನಿ ಬಂದಿತೂ, ಮೋಹವೆಂಬೋ ಒಬ್ಬ–ಮೋಸಗಾರ। ಇದರ ಮೇಲೆ ಮೂವ್ವರ–ಕಳ್ಳ ಬಂಟರ ಕಾಟ।"[25] ಎಂದು ಮತ್ತೆ ಮತ್ತೆ ಈ ಮೂರು: ಹೆಣ್ಣು, ಹೊನ್ನು, ಮಣ್ಣು. ಮತ್ತು ಐದು: ಪಂಚೇಂದ್ರಿಯಗಳು. ಒಟ್ಟು ಎಂಟು ರೂಪಗಳನ್ನು/ಬಾಧೆಗಳನ್ನು ತಮ್ಮ ಕೀರ್ತನೆಗಳಲ್ಲಿ ತಂದು ಅವುಗಳಿಂದ ಮುಕ್ತಿ ಪಡೆಯುವುದೇ ನಿಜವಾದ ಜೀವನ ಮುಕ್ತಿಯೆಂಬುದನ್ನು ಪದೇ ಪದೇ ಹೇಳುತ್ತಾರೆ.

ಕೈವಾರ ನಾರೇಯಣರು ಕೀರ್ತನೆಗಳಲ್ಲಿ ಮುಕ್ತಿಯ ಪಾಠದ ಜೊತೆಗೆ ತತ್ವಜ್ಞಾನವನ್ನು, ಗಣಿತ– ಸಂಖ್ಯಾಶಾಸ್ತ್ರವನ್ನೂ ಹೇಳುತ್ತಾರೆ.

"ಅಕ್ಷರಕ್ಷರಮುಲು ಅನ್ನಿ – ನಾಲ್ಗೇಸಿಗಾ
ಭಾಗಿಂಚಿ ಅಂದುಲೋ – ನಿಲುವ ದೀಸಿ ।
ತೀಸಿನ ನಿಲುವಲೋ – ತಿರಿಗಿ ಅಯಿದೇಸಿಗಾ
ಭಾಗಿಂಚಿ ಲಬ್ಧಭಾಗಮೇರ್ಪರಿಂಚಿ ।
ಲಬ್ಧಮುನ ವುನ್ನಟ್ಟಿ – ನಾಲ್ಗು ಅಕ್ಷರಮುಲಕು
ನಾಮಮೊಕ್ಕಟಿ ದಾನಿ – ಲಘುವು ತೆಲಿಸಿ ।
ಏಕಾಕ್ಷರಂಬನಿ – ಯೆರಿಗಿನ ನೆರಯೋಧ
ಯೆರುಕ ಮಾನಸುಡತಡು – ಯೋಗಶಾಲಿ ॥
ಮರ್ಮಮಿಡುವಕ ಪರುಲನು – ಮಾಟಲಾಡು ।

ಮುಗ್ಧಡನಿಪಿಂಚುಕೊನಿ ತಾನು – ಮುರಿಯುಚುಂಡು ।
ಭಕ್ತಮಂದಾರ ಬ್ರಹ್ಮಾಂಡಪುರ ವಿಹಾರ ।
ಜಯತು ಜಗದೀಶ ಅಮರನಾರೇಯಣೇಶಾ ॥27॥"[26]

(ಅಕ್ಷರ–ಕ್ಷರಗಳನ್ನು ಒಟ್ಟುಗೂಡಿಸಿ ಮೊತ್ತವನ್ನು ನಾಲ್ಕರಿಂದ ಭಾಗಿಸಬೇಕು. ಆಗ ಉಳಿಯುವ ಶೇಷ ಸಂಖ್ಯೆಯನ್ನು ಹಿಂದಿನ ಮೊತ್ತದ ಸಂಖ್ಯೆಯಲ್ಲಿ ಋಣವಾಗಿ ಪರಿಗಣಿಸಿ ವ್ಯವಕಲನ ಮಾಡಬೇಕು. ಆ ಬಳಿಕ ಉಳಿಯುವ ಮೊತ್ತದ ಸಂಖ್ಯೆಯನ್ನು ಐದರಿಂದ ಮತ್ತೊಮ್ಮೆ ಎರಡನೇ ಸಲ ಭಾಗಿಸಬೇಕು. ಈಗ ಲಬ್ಧಭಾಗವನ್ನು ಪರಿಗಣಿಸಬೇಕು. ಹೀಗೆ ಲಬ್ಧದಲ್ಲಿರುವ ನಾಲ್ಕು ಅಕ್ಷರಗಳಿಗೆ ಒಂದೇ ಹೆಸರುಂಟು. ಆ ಹೆಸರಿನ ಮರ್ಮವನ್ನು ತಿಳಿದು, ಅದು ಏಕಾಕ್ಷರವೂ ಆಗಿದೆಯೆಂಬುದನ್ನು ಆದ್ಯಂತ ವಿವರಗಳೊಡನೆ ಅರಿತ ಸಾಹಸವಂತನಾದ ಸಾಧಕನೇ ಯೋಗಶಾಲಿ. ಈತನು ತಾನು ಯೋಗಸಾಧಕನೆಂಬ ಮರ್ಮವನ್ನು ಬಿಟ್ಟುಕೊಡದೆ ಸಾಮಾನ್ಯನಂತೆಯೇ ಇತರರೊಡನೆ ಸಂಭಾಷಿಸುತ್ತಾನೆ. ಇತರರ ಬಾಯಿಂದ ಮುಗ್ದನೆಂದು ಕರೆಯಿಸಿಕೊಳ್ಳುತ್ತಾ ತಾನು ಮಾತ್ರ ಆನಂದಾನುಭೂತಿಯುಳ್ಳ ಜ್ಞಾನಿಯಾಗಿ ಸಂಚರಿಸುತ್ತಿರುತ್ತಾನೆ"[27]. ಇಲ್ಲಿ ಮೂರು ಹಂತಗಳಿದ್ದು "ಮೊದಲನೆಯ ಹಂತ: ಅಕ್ಷರ–ಕ್ಷರಗಳು; ಈ ಸಂಖ್ಯೆಯನ್ನು 4ರಿಂದ ಭಾಗಿಸಿದರೆ ಶೇಷ ಸಿಕ್ಕುತ್ತದೆ. ಎರಡನೇ ಹಂತದಲ್ಲಿ ಅಕ್ಷರ–ಕ್ಷರಗಳ ಮೊತ್ತದಲ್ಲಿ ಶೇಷವನ್ನು ಕಳೆದು ವ್ಯವಕಲನ ಮಾಡಿದರೆ ಶೇಷಮೊತ್ತ ಸಿಕ್ಕುತ್ತದೆ. ಮೂರನೇ ಹಂತದಲ್ಲಿ ಶೇಷ ಮೊತ್ತವನ್ನು 5 ರಿಂದ ಭಾಗಿಸಿದರೆ 4 ಲಬ್ಧ ಶೇಷ ಸಿಗುತ್ತದೆ. ಇಲ್ಲಿಗೆ ಲೆಕ್ಕ ಮುಗಿದು ಲಬ್ಧಶೇಷ 4 ಎಂಬುದು ನಿತ್ಯವಾದ ಸಂಖ್ಯೆ. ಅದು ಬ್ರಹ್ಮಾಕ್ಷರವಾಗಿರುವ 'ಓಂ' ಎಂಬ ಪ್ರಮಾಣವನ್ನು ಸೂಚಿಸುತ್ತದೆ. ಓಂಕಾರದಲ್ಲಿ [ಅ+ಉ+ಮ್+ಂ] ಎಂಬ ನಾಲ್ಕು ಅಕ್ಷರಗಳಿವೆ. ಓಂಕಾರದ ಈ ಪ್ರಣವವೇ ವಿಶ್ವಸತ್ವ, ಪ್ರಣವವೇ ಪ್ರಣಾಧಾರ, ಸೃಷ್ಟಿಗಿಂತ ಮೊದಲು ಶೂನ್ಯರೂಪದಲ್ಲಿ ಪ್ರಣವವೇ ಪರಬ್ರಹ್ಮವಾಗಿತ್ತು"[28]. ಹೀಗೆ ಅಕ್ಷರಗಳ ಸಂಖ್ಯೆಗಳ ಗುಣಾಕಾರ ಭಾಗಾಕಾರದಿಂದ ತತ್ವಜ್ಞಾನದ, "ಓಂ"ಕಾರ ಉದಯದ, ಗಣಿತದ ಸಂಖ್ಯಾ–ತತ್ವಶಾಸ್ತ್ರವನ್ನು ಒಂದೇ ಪದ್ಯದಲ್ಲಿ ಹೇಳುತ್ತಾರೆ.

ಕೈವಾರ ನಾರೇಯಣಪ್ಪನವರ ವಚನ, ಶತಕ, ತತ್ವ ಕೀರ್ತನೆಗಳನ್ನು ಅಭ್ಯಸಿಸುವುದೇ ಒಂದು ಮಹಾನ್ ಸಂಶೋಧನೆ ಎನಿಸಿಕೊಳ್ಳುತ್ತದೆ. ಇಂತಹ ಒಬ್ಬ ಯೋಗಿ, ಕೀರ್ತನಕಾರ, ವಚನಕಾರ, ತತ್ವಪದಕಾರ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ, ಕನ್ನಡ ಸಾಹಿತ್ಯ ಸಾಲಿನಲ್ಲಿ ಸೇರದಿರುವುದು ಕನ್ನಡ ಸಾಹಿತ್ಯದ ದುರಂತವೇ ಸರಿ.

ಅಥವಾ ಕೆಲವು ಮೂಲಭೂತವಾದಿಗಳ ಜಾಣ ಕುರುಡುಗಳಿಂದ ಇವರ ಸಾಹಿತ್ಯಕ್ಕೆ ಬೆಲೆ ಬೆಂಬಲ ಸಿಗದೇ ದೂರ ಉಳಿದಿರುವುದೇ ಆಗಿದೆ. ಅಥವಾ ಕೈವಾರ ತಾತಯ್ಯನವರ ಜೀವನ ಮತ್ತು ಕ್ಷೇತ್ರ ಎರಡೂ ತೆಲುಗು ಪ್ರಭಾವದಿಂದಿದ್ದು ಸಾಹಿತ್ಯವೂ ಹೆಚ್ಚು ತೆಲುಗು ಆಗಿರುವುದರಿಂದ ಇದ ಕನ್ನಡದ್ದಲ್ಲ ಎಂಬ ದುರಾಲೋಚನೆಯಿಂದಲೂ ತಾತಯ್ಯನವರ ಸಾಹಿತ್ಯ ಅಲಕ್ಷ್ಯಕ್ಕೆ ಒಳಗಾಗಿದೆ ಎಂದು ತಿಳಿಯಬಹುದಾಗಿದೆ. ಆದರೂ ಕೋಲಾರ ಪ್ರದೇಶದಲ್ಲಿ ಇಂದಿಗೂ ಕೈವಾರ ತಾತಯ್ಯನವರ ಸಾಹಿತ್ಯ ಜಾನಪದರ ಬಾಯಿಂದ ಮಾತ್ರ ದೂರವಾಗಿಲ್ಲ ಇವರು ಕೋಲಾರದ ಹೆಮ್ಮೆಯಾಗಿದ್ದಾರೆ. ಕೈವಾರ ತಾತಯ್ಯನವರ ಸಾಹಿತ್ಯ ಒಂದು ಮಹಾಸಾಗರವೇ ಆಗಿದೆ. ಇಂತಹ ಸಾಹಿತ್ಯದಲ್ಲಿ ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಪ್ರಮುಖವಾಗಿ ಅಳವಡಿಸಿಕೊಳ್ಳಬೇಕಾದ ಗುಣವನ್ನು ತಮ್ಮ ತೆಲುಗು ಕೀರ್ತನೆಯಲ್ಲಿ ಈ ರೀತಿ ನಿರೂಪಿಸುತ್ತಾರೆ.

"ನೀಚಮ್ಮೈನಾ ಸಂಸಾರಮು–ನಿಜಮನಿ ನೀವುಂಡರಾದು ।
ಆತ್ಮಯೋಗಮು ಅಭ್ಯಾಸಿಂಚಾರ । ಓ ಸಜ್ಜಾನಸಂಗಾ ।
ಪರಮ ಭಾಗವತುಡು ನೀವೇರಾ
ಬುದ್ಧೀಮಂತುಡೈತೇ ಮಂಚಿ–ಬೋಧಗುರುನಿ ಪ್ರಾಪು ಜೇರಿ ।
ಬಾಧಗುರುವುಲ ನಮ್ಮಾಬೋಕುರಾ । ಓ ಸಜ್ಜಾನಸಂಗಾ ।
ಪರಮ ಭಾಗಾವತುಡೂ ನೀವೇರಾ"[29]

(ನೀಚವಾದ ಸಂಸಾರವು [ಜೀವನವು] ನಿಜವೆಂದು ನೀನಿರಬಾರದು, ಆತ್ಮ ಯೋಗವನ್ನು ಅಭ್ಯಾಸಮಾಡು, ಓ ಮರುಳೇ ಸಜ್ಜನರ ಸಂಗದಲ್ಲಿ ನೀನೇ ಪರಮ ಭಾಗವತ [ಮಹಾವಿಷ್ಣು] ಎಂದರೆ ಮತ್ತೆ ಬುದ್ದಿವಂತನಾದರೆ ಒಳ್ಳೆಯ ಬೋಧನೆ ಮಾಡುವ ಗುರುವಿನ ಪಕ್ಕದಲ್ಲಿ ಸೇರಿ ಲೋಕ ಲಾಲಸೆಗಳನ್ನು ಹೊಂದಿರುವವರನ್ನ ನಂಬಬೇಡವೋ ಮರುಳೇ ಸಜ್ಜನರ ಸಂಗದಲ್ಲಿ ನೀನೇ ಪರಮ ಭಾಗವತ [ಮಹಾವಿಷ್ಣು]) ಎನ್ನುತ್ತಾ ನಮ್ಮ ಕಲಿಯುವ ಕ್ರಿಯೆ ಮತ್ತು ಬದುಕುವ ಕ್ರಿಯೆಯಬಗ್ಗೆ "ಯಾಲಲು" ಎಂಬ ಈ ಕೀರ್ತನೆಯಲ್ಲಿ ತಿಳಿಹೇಳುತ್ತಾರೆ ತಾತಯ್ಯನವರು.

**ಅಡಿಟಿಪ್ಪಣಿಗಳು:**

1. ಮಣ್ಣ ಬಳೆ ನಾದ, ಪು.37 ರಲ್ಲಿ ಡಾ. ಸಿ. ಎಸ್. ದ್ವಾರಕಾನಾಥ್‌ರವರು ಕೈವಾರ ತಾತಯ್ಯನವರ ಜನನ ಮತ್ತು ಮರಣದ ಬಗ್ಗೆ ತಮ್ಮ ಸಂಶೋಧನೆಯಲ್ಲಿ ಕಂಡುಕೊಂಡ ಮೌಖಿಕವಾದ, ಜನಜನಿತವಾಗಿ ಪ್ರಚಲಿತದಲ್ಲಿರುವ ಹಾಗು ಲಭ್ಯವಿರುವ ಲಿಖಿತ ಆಧಾರಗಳನ್ನು ಹಿನ್ನೆಲೆಯಾಗಿಟ್ಟುಕೊಂಡು 3 ಅಂಶಗಳನ್ನು ಪ್ರತಿಪಾದಿಸುತ್ತಾರೆ. ಇಲ್ಲಿ ಮೊದಲನೇ ಅಂಶವನ್ನು ಮಾತ್ರ ಉಲ್ಲೇಖಿಸುತ್ತೇನೆ. ಹೆಚ್ಚಿನ ವಿವರಗಳಿಗಾಗಿ ಮೇಲೆ ತಿಳಿಸಿದ ಸಂಖ್ಯೆಯ ಪುಟವನ್ನು ಪರಾಮರ್ಶಿಸಬಹುದು. 1ನೇ ಅಂಶದ ವಿವರಣೆ ಹೀಗಿದೆ. "ಕೈವಾರದ ಯೋಗಿ ನಾರಾಯಣರ ಆಶ್ರಮದಲ್ಲಿ ಪ್ರತಿವರ್ಷ ಕೈವಾರ ತಾತಯ್ಯನವರ ಜೀವ ಸಮಾಧಿಯ ನೆನಪಲ್ಲಿ ಜೇಷ್ಠ ಶುದ್ಧ ತದಿಗೆಯಂದು ಪರ್ವದಿನೋತ್ಸವ ಆಚರಿಸುತ್ತಾರೆ. 2001ನೇ ವರ್ಷ (ವಿಷ್ಣು) ಸಂವತ್ಸರದಲ್ಲಿ 166ನೇ ಪರ್ವದಿನೋತ್ಸವವನ್ನು ಆಚರಿಸಲಾಯಿತು. ಇದರ ಪ್ರಕಾರ ಮೊದಲನೇ ಪರ್ವ ದಿನೋತ್ಸವವನ್ನು ಅಂದರೆ ಅವರು ಅಂತಿಮವಾಗಿ ಸಮಾಧಿ ಪ್ರವೇಶ ಮಾಡಿದ ದಿನವನ್ನು ಲೆಕ್ಕ ಮಾಡಿ, 166ವರ್ಷಗಳು ಕಳೆದು 167ನೇ ವರ್ಷ ಆರಂಭವಾಗಿರುವುದರ ಆಧಾರದ ಮೇಲೆ ಸಿದ್ಧಿಯ ವರ್ಷ 1836 ಎಂದು ನಿಶ್ಚಯಿಸಲಾಯಿತು. ಈ ವರ್ಷದಿಂದ ಹಿಂದಕ್ಕೆ ತಾತಯ್ಯನವರು 110 ವರ್ಷಗಳ ಕಾಲ ಬದುಕಿದ್ದರೆಂಬ ತಥ್ಯದ ಆಧಾರದ ಮೇಲೆ 1836–110=1726ರ ಲೆಕ್ಕದ ಪ್ರಕಾರ ತಾತಯ್ಯನವರ ಜನ್ಮ ಸಂವತ್ಸರ ಕ್ರಿ.ಶ. 1726 ಎಂದು ನಿಶ್ಚಯಿಸಲಾಯಿತು. ಸುಮಾರು 20 ವರ್ಷಗಳ ಹಿಂದೆ ಕೈವಾರದ ಯೋಗಿ ನಾರೇಯಣ ಆಶ್ರಮವು ಕನ್ನಡದಲ್ಲಿ ಪ್ರಕಟಿಸಿದ ಜೀವನ ಚರಿತ್ರೆಯಲ್ಲಿ ಇದೇ ವರ್ಷ ನಮೂದಿಸಲಾಗಿದೆ." ಎಂದು ದೃಢೀಕರಿಸುತ್ತಾರೆ ಹಾಗು ಇದು ಕಾಲಗಣನೆಯಲ್ಲಿ ತುಂಬಾ ಹತ್ತಿರವಾಗಿದೆ.
2. ಸದ್ಗುರು ಶ್ರೀ ಯೋಗಿನಾರೇಯಣ ತಾತಯ್ಯನವರ ಜೀವನ ಚರಿತ್ರೆ, ಪು. 30–31.
3. ಸದ್ಗುರು ಶ್ರೀ ಯೋಗಿನಾರೇಯಣ ತಾತಯ್ಯನವರ ಜೀವನ ಚರಿತ್ರೆ, ಪು. 116.
4. Ibid, P–62.
5. ಮಣ್ಣ ಬಳೆ ನಾದ, ಪು. 10–11.
6. ಮಣ್ಣ ಬಳೆ ನಾದ, ಪು. 12.
7. ಸದ್ಗುರು ಶ್ರೀ ಯೋಗಿನಾರೇಯಣ ತಾತಯ್ಯನವರ ಜೀವನ ಚರಿತ್ರೆ, ಪು. 146.
8. ಸದ್ಗುರು ಶ್ರೀ ಯೋಗಿನಾರೇಯಣ ತಾತಯ್ಯನವರ ಜೀವನ ಚರಿತ್ರೆ, ಪು. 146. ಮತ್ತು ಮಣ್ಣ ಬಳೆ ನಾದ, ಪು. 12 (* ಕೃತಿಯನ್ನು ಎರಡೂ ಪುಸ್ತಕಗಳಲ್ಲಿ ದಾಖಲಿಸಲಾಗಿದೆ. ** ಮಣ್ಣಬಳೆನಾದ ಪುಸ್ತಕದಲ್ಲಿ ಮಾತ್ರ ದಾಖಲಾಗಿದೆ.*** ಸದ್ಗುರು ಶ್ರೀ ಯೋಗಿ ನಾರೇಯಣ ತಾತಯ್ಯನವರ ಜೀವನ ಚರಿತ್ರೆಯಲ್ಲಿ ಮಾತ್ರ ದಾಖಲಾಗಿದೆ.)

9. ಮಣ್ಣ ಬಳೆ ನಾದ, ಪು. 12.

10. Ibid.

11. ಸದ್ಗುರು ಶ್ರೀ ಯೋಗಿನಾರೇಯಣ ತಾತಯ್ಯನವರ ಜೀವನ ಚರಿತ್ರೆ, ಪು. 107.

12. ಹೊಸತು ಪತ್ರಿಕೆ (ಫೆಬ್ರವರಿ–2019), ಪುಟ. 06.

13. ಸದ್ಗುರು ಶ್ರೀ ಯೋಗಿನಾರೇಯಣ ತಾತಯ್ಯನವರ ಜೀವನ ಚರಿತ್ರೆ, ಪು. 107.

14. ಬ್ರಹ್ಮಾಂಡಪುರಿ ಶತಕ, ಪು. 103.

15. ಸದ್ಗುರು ಶ್ರೀ ಯೋಗಿನಾರೇಯಣ ತಾತಯ್ಯನವರ ಜೀವನ ಚರಿತ್ರೆ, ಪು. 108.

16. ಸದ್ಗುರು ಶ್ರೀ ಯೋಗಿನಾರೇಯಣ ತಾತಯ್ಯನವರ ಜೀವನ ಚರಿತ್ರೆ, ಪು. 109.

17. ಶ್ರೀ ಅಮರನಾರೇಯಣ ವೇದಾಂತ ಸಾರಾವಳಿ ಕೀರ್ತನೆಗಳು, ಕೀ.ಸಂ. 47, ಪು.62.

18. Ibid – P– 63. ಕೀ.ಸಂ.–49

19. Ibid – P– 65. ಕೀ.ಸಂ.–51

20. Ibid.

21. Ibid – P– 69. ಕೀ.ಸಂ.–57

22. ಶ್ರೀ ಅಮರನಾರೇಯಣ ವೇದಾಂತ ಸಾರಾವಳಿ ಕೀರ್ತನೆಗಳು, ಪು.62. ಕೀ.ಸಂ.–47.

23. Ibid – P– 63. ಕೀ.ಸಂ.–48.

24. Ibid – P– 66. ಕೀ.ಸಂ.–52.

25. Ibid – P– 69.ಕೀ.ಸಂ.–57.

26. ಬ್ರಹ್ಮಾಂಡ ಪುರಿ ಶತಕ, ಪು–259.

27. Ibid - ಪು–260.

28. Ibid.

29. ಶ್ರೀ ಅಮರನಾರೇಯಣ ವೇದಾಂತ ಸಾರಾವಳಿ ಕೀರ್ತನೆಗಳು, ಕೀ.ಸಂ. 67, ಪು.77.

## ಪರಾಮರ್ಶನ ಗ್ರಂಥಗಳು:


1. ಸದ್ಗುರು ಶ್ರೀ ಯೋಗಿನಾರೇಯಣ ತಾತಯ್ಯನವರ ಜೀವನ ಚರಿತ್ರೆ (2016), ವಾನರಾಶಿ ಬಾಲಕೃಷ್ಣ ಭಾಗವತರ್, ಧರ್ಮಾಧಿಕಾರಿಗಳು, ಶ್ರೀ ಯೋಗಿನಾರೇಯಣ ಯತೀಂದ್ರರ ಮಠ, ಶ್ರೀ ಕ್ಷೇತ್ರ ಕೈವಾರ, ಚಿಕ್ಕಬಳ್ಳಾಪುರ ಜಿಲ್ಲೆ, ಕರ್ನಾಟಕ.
2. ಶ್ರೀ ಅಮರನಾರೇಯಣ ವೇದಾಂತ ಸಾರಾವಳಿ ಕೀರ್ತನೆಗಳು (2016), ಧರ್ಮಾಧಿಕಾರಿಗಳು, ಶ್ರೀ ಯೋಗಿನಾರೇಯಣ ಯತೀಂದ್ರರ ಮಠ, ಶ್ರೀ ಕ್ಷೇತ್ರ ಕೈವಾರ, ಚಿಕ್ಕಬಳ್ಳಾಪುರ ಜಿಲ್ಲೆ, ಕರ್ನಾಟಕ.
3. ಬ್ರಹ್ಮಾಂಡಪುರಿ ಶತಕ (ತೆಲುಗು ಮೂಲ–ಕನ್ನಡ ವ್ಯಾಖ್ಯಾನ) (2010), ಕೈಪು ಲಕ್ಷ್ಮೀ ನರಸಿಂಹಶಾಸ್ತ್ರಿ – ಶ್ರೀ ಯೋಗಿನಾರೇಯಣ ಯತೀಂದ್ರರ ಮಠ, ಶ್ರೀ ಕ್ಷೇತ್ರ ಕೈವಾರ, ಚಿಕ್ಕಬಳ್ಳಾಪುರ ಜಿಲ್ಲೆ, ಕರ್ನಾಟಕ.
4. ಮಣ್ಣ ಬಳೆ ನಾದ (ಕೈವಾರ ತಾತಯ್ಯ ಒಂದು ಅಧ್ಯಯನ) (2010), ಡಾ. ಸಿ. ಎಸ್. ದ್ವಾರಕಾನಾಥ್ & ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.